**SC No. 138/2021**
**P.W. 5**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C.No. 138/2021**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **19.05.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

4. ದಿನಾಂಕ 03.03.2021 ರಂದು ನಾನು ಪರಪ್ಪನ ಅಗ್ರಹಾರ ಜೈಲಿಗೆ ಹೋಗಿದ್ದು, ಅಲ್ಲಿ ಚಾಸಾ 3 ರಿಂದ 6 ರವರು ಹಾಜರಾಗಿದ್ದು, ನಾನು ಜೈಲಿನ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದ್ದು, ಅವರು ಒಂದೇ ರೀತಿಯ ಹೋಲಿಕೆ ಬರುವಂತಹ ಐದೈದು ಜನರನ್ನು ಪ್ರತಿಯೊಬ್ಬ ಆರೋಪಿಯ ಗುರುತು ಕವಾಯತು ನಡೆಸುವ ಕಾಲಕ್ಕೆ ಕಳುಹಿಸಿದ್ದರು. ಅದರಂತೆ ನಾನು ಪ್ರತಿಯೊಬ್ಬ ಆರೋಪಿಯನ್ನು ಪ್ರತ್ಯೇಕವಾಗಿ ಆ ವ್ಯಕ್ತಿಗಳ ನಡುವೆ ನಿಲ್ಲಿಸಿ, ಚಾಸಾ 3 ರಿಂದ 6 ರವರನ್ನು ಒಬ್ಬೊಬ್ಬರನ್ನಾಗಿ ಆರೋಪಿತರನ್ನು ಗುರುತಿಸುವಂತೆ ಕೇಳಿಕೊಂಡಿದ್ದು, ಅದರಂತೆ ಚಾಸಾ 6 ಶಿವಪ್ರಸಾದ್ ರವರು ರಾಜೇಶ್ ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿಯಲು ವಿಫಲಗೊಂಡರು. ನಂತರ ಚಾಸಾ 5 ನಂದನ್ ರವರು ರಾಜೇಶ್ ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿಯಲು ವಿಫಲಗೊಂಡರು. ನಂತರ ಚಾಸಾ 4 ಮಂಜುನಾಥ್ ರವರು ರಾಜೇಶ್ ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿಯಲು ವಿಫಲಗೊಂಡರು. ಚಾಸಾ 3 ಶರತ್ ಕುಮಾರ್ ರವರು ರಾಜೇಶ್ ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿದರು.

5. ಎರಡನೇ ರೌಂಡ್ ನಲ್ಲಿ ಆರೋಪಿ ಬಾಲಕೃಷ್ಣನನ್ನು ಉಳಿದ ವ್ಯಕ್ತಿಗಳ ಜೊತೆ ನಿಲ್ಲಿಸಿ ಆತನನ್ನು ಚಾಸಾ 3 ರಿಂದ 6 ರವರು ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿದರು.

6. ಮೂರನೇ ರೌಂಡ್ ನಲ್ಲಿ ಆರೋಪಿ ಭರತ್ ನನ್ನು ಉಳಿದ ವ್ಯಕ್ತಿಗಳ ಜೊತೆ ನಿಲ್ಲಿಸಿ ಆತನನ್ನು ಚಾಸಾ 3 ರಿಂದ 6 ರವರು ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿದರು.

7. ನಾಲ್ಕನೇ ರೌಂಡ್ ನಲ್ಲಿ ಆರೋಪಿ ಅರುಣ್ ಕುಮಾರ್ ನನ್ನು ಉಳಿದ ವ್ಯಕ್ತಿಗಳ ಜೊತೆ ನಿಲ್ಲಿಸಿ ಆತನನ್ನು ಚಾಸಾ 3 ರಿಂದ 6 ರವರು ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿದರು.

**SC No. 138/2021**
**P.W. 5**

8. ಐದನೇ ರೌಂಡ್ ನಲ್ಲಿ ಆರೋಪಿ ವರುಣ್ ಕುಮಾರ್ ನನ್ನು ಉಳಿದ ವ್ಯಕ್ತಿಗಳ ಜೊತೆ ನಿಲ್ಲಿಸಿ ಆತನನ್ನು ಚಾಸಾ 6 ಶಿವಪ್ರಸಾದ್ ಮತ್ತು ಚಾಸಾ 4 ಮಂಜುನಾಥ್ ರವರು ವರುಣ್ ಕುಮಾರ್ ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿಯಲು ವಿಫಲಗೊಂಡರು. ಚಾಸಾ 3 ಮತ್ತು 5 ರವರು ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿದರು.

9. ಆರನೇ ರೌಂಡ್ ನಲ್ಲಿ ಆರೋಪಿ ಶಶಿಕುಮಾರ್ ನನ್ನು ಉಳಿದ ವ್ಯಕ್ತಿಗಳ ಜೊತೆ ನಿಲ್ಲಿಸಿ ಆತನನ್ನು ಚಾಸಾ 6 ಶಿವಪ್ರಸಾದ್ ಮತ್ತು ಚಾಸಾ 4 ಮಂಜುನಾಥ್ ರವರು ಶಶಿಕುಮಾರ್ ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿಯಲು ವಿಫಲಗೊಂಡರು. ಚಾಸಾ 3 ಮತ್ತು 5 ರವರು ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿದರು.

10. ಏಳನೇ ರೌಂಡ್ ನಲ್ಲಿ ಆರೋಪಿ ಇಂದ್ರಕುಮಾರ್ ನನ್ನು ಉಳಿದ ವ್ಯಕ್ತಿಗಳ ಜೊತೆ ನಿಲ್ಲಿಸಿ ಆತನನ್ನು ಚಾಸಾ 3 ರಿಂದ 6 ಆರೋಪಿಯನ್ನು ಗುರುತು ಕವಾಯತಿನಲ್ಲಿ ಕಂಡು ಹಿಡಿಯಲು ವಿಫಲಗೊಂಡರು.

11. ಈ ಬಗ್ಗೆ ಗುರುತು ಕವಾಯತು ವರದಿಯನ್ನು ನೀಡಿದ್ದು, ಸದರಿ ವರದಿಗಳನ್ನು ಒಟ್ಟಾಗಿ ನಿಶಾನೆ ಪಿ13 ಎಂದು, ನನ್ನ ಸಹಿಯನ್ನು ನಿಶಾನೆ ಪಿ13(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ: **ಕಾಲಾವಕಾಶ ಕೋರಿದ್ದು, ಪಾಟೀ ಸವಾಲು ಮುಂದೂಡಲಾಗಿದೆ.**</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.